ಯೋಜನೆಯಡಿಯಲ್ಲಿ 18 ವರ್ಷಕ್ಕೂ ಮೇಲ್ಪಟ್ಟ ಹಾಗೂ 6,000 ರೂ.ಗಳಿಗಿಂತ ಕಡಿಮೆ ವಾರ್ಷಿಕ ಆದಾಯವಿರುವ ವಿಧವೆ ವಿಧಾವಾ ವೇತನಕ್ಕೆ ಅರ್ಹಳಾಗಿರುತ್ತಾಳೆ. ಈ ಕಾರ್ಯಕ್ರಮಗಳಡಿಯಲ್ಲಿ ಆ ವ್ಯಕ್ತಿಯು 18 ವರ್ಷಕ್ಕೂ ಮೇಲ್ಪಟ್ಟ ಮಗ ಅಥವಾ ಮಗಳಿದ್ದರೂ ಈ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ. ಆದರೆ ಇಂತಹ ಪ್ರಕರಣಗಳಲ್ಲಿ ಮಂಜೂರು ಮಾಡುವ ಪ್ರಾಧಿಕಾರವು ಇಂತಹ ಮಗ ಅಥವಾ ಮಗಳು ಫಲಾನುಭವಿಯನ್ನು ಕೈಬಿಟ್ಟಿದ್ದು, ಫಲಾನುಭವಿ ಅವರಿಂದ ಯಾವುದೇ ಸಹಾಯ ಪಡೆಯುತ್ತಿಲ್ಲವೆಂದು ಮನದಟ್ಟು ಮಾಡಿಕೊಳ್ಳ-ಬೇಕಾಗಿರುತ್ತದೆ. ಕೆಲವು ಜಿಲ್ಲೆಗಳಲ್ಲಿ 18 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ಮಕ್ಕಳಿರುವ ಫಲಾನುಭವಿಗಳಿಗೆ ವೇತನವನ್ನು ಮಂಜೂರು ಮಾಡುವಲ್ಲಿ ಗೊಂದಲವಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸರ್ಕಾರವು ಈ ವಿಷಯವನ್ನು ಸ್ಪಷ್ಟೀಕರಿಸುತ್ತಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಂದಿಗೆ ಸಮಾಲೋಚಿಸಿ ಕೂಡಲೇ ಸುತ್ತೋಲೆ ಹೊರಡಿಸುವುದು.

ಪಿರಿಯಾಪಟ್ಟಣ ಟೌನ್‌ನಲ್ಲಿ ಬೈಪಾಸ್ ರಸ್ತೆ ನಿರ್ಮಾಣ

287 (2340) ಶ್ರೀ ಬಸವರಾಜು ಹೆಚ್.ಸಿ.(ಪಿರಿಯಾಪಟ್ಟಣ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣ ನಗರ ಮಧ್ಯ ಭಾಗದಲ್ಲಿ ಹಾದು ಹೋಗುವ ರಸ್ತೆಯನ್ನು ಮೇಲ್ದರ್ಜೆಗೇರಿಸಲಾಗಿದ್ದು, ಅದನ್ನು ನಗರ ಪ್ರದೇಶದಿಂದ ಹೊರಗೆ ಬೈಪಾಸು ಸರ್ವೆಕಾರ್ಯ ಮುಗಿಸಲಾಗಿದ್ದು, ರಸ್ತೆ ನಿರ್ಮಿಸುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಆ) ಈ ಯೋಜನೆಗೆ ತಗಲುವ ವೆಚ್ಚ ಎಷ್ಟು ಹಾಗೂ ಯೋಜನೆಯನ್ನು ಪ್ರಾರಂಭಿಸುವುದು ಯಾವಾಗ;

ಇ) ಈ ಯೋಜನೆಯನ್ನು ಎಷ್ಟು ಅವಧಿಯೊಳಗೆ ಪೂರ್ಣಗೊಳಿಸಲಾಗುವುದು;

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕರ್ನಾಟಕದಲ್ಲಿನ 175 ತಾಲ್ಲೂಕು ಕೇಂದ್ರಗಳಲ್ಲಿ 2001ರ ಜನಗಣತಿಯಂತೆ ಪಿರಿಯಾಪಟ್ಟಣವು ಜನಸಂಖ್ಯೆ ಆಧಾರದ ಮೇಲೆ 153 ನೇ ಸ್ಥಾನದಲ್ಲಿದೆ. (ಜನಸಂಖ್ಯೆ ಕೇವಲ 14922) ಇದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಇನ್ನುಳಿದ ಎಲ್ಲ ತಾಲ್ಲೂಕು ಕೇಂದ್ರಗಳಿಗೆ ಬೈಪಾಸ್ ರಸ್ತೆಗಳನ್ನು ನಿರ್ಮಿಸಲು ಇನ್ನೂ ಸಾಧ್ಯವಾಗಿಲ್ಲ. ಆದುದರಿಂದ ಈ ಹಂತದಲ್ಲಿ ಇಷ್ಟು ಕಡಮೆ ಜನಸಂಖ್ಯೆ ಇರುವ ಪಿರಿಯಾಪಟ್ಟಣಕ್ಕೆ ಬೈಪಾಸ್ ನಿರ್ಮಿಸಲು ಸಾಧ್ಯವಾಗುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಹೊಸ ತಾಲ್ಲೂಕು ರಚನೆ

288 (2457) ಶ್ರೀ ಗಡ್ಡದೇವರಮಠ ಗದ್ದಯ್ಯ ಶಿವಮೂರ್ತಯ್ಯ (ಶಿರಹಟ್ಟಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉದ್ದೇಶಿತ ಹೊಸ ತಾಲ್ಲೂಕುಗಳ ರಚನೆಯ ಕುರಿತು ಸರಕಾರ ಅನುಸರಿಸುತ್ತಿರುವ ಮಾನದಂಡ ಏನು ;

ಆ) ಉದ್ದೇಶಿತ ತಾಲ್ಲೂಕುಗಳ ಪಟ್ಟಿಯನ್ನು ಸರಕಾರ ಸಿದ್ದಪಡಿಸಿದೆಯೇ;

ಇ) ಹಾಗಿದ್ದಲ್ಲಿ ಗದಗ ಜಿಲ್ಲೆಯ ಲಕ್ಷ್ಮೇಶ್ವರ ನಗರ ಸದರಿ ನಿಯೋಜಿತ ತಾಲ್ಲೂಕುಗಳ ಪಟ್ಟಿಯಲ್ಲಿ ಸೇರಿದೆಯೇ;

ಈ) ಹಾಗಾದರೆ, ಈಗಾಗಲೇ ಗುರುತಿಸಿದ ನಿಯೋಜಿತ ತಾಲ್ಲೂಕುಗಳಿಗೆ ವಿಶೇಷ ತಹಸೀಲ್ದಾರರ ನೇಮಕ ಆಗಿದೆಯೇ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು) :

ಆ) ತಾಲ್ಲೂಕುಗಳನ್ನು ಪುನರ್ ರಚನೆ ಮಾಡುವಾಗ ಆಡಳಿತಾತ್ಮಕ ಅನುಕೂಲತೆ, ಸಾರ್ವಜನಿಕ ಹಿತಾಸಕ್ತಿ, ಕಾನೂನು ಮತ್ತು ಸುವ್ಯವಸ್ಥೆ ಆ ಪ್ರದೇಶದ ಸಾಮಾಜಿಕ ಹಾಗೂ ಕೈಗಾರಿಕಾ ಅಭಿವೃದ್ಧಿ ಇತ್ಯಾದಿ ಅಂಶಗಳನ್ನು ಮಾನದಂಡಗಳೆಂದು ಪರಿಗಣಿಸ ಬೇಕಾಗುತ್ತದೆ.

ಆ) ರಾಜ್ಯದಲ್ಲಿ ತಾಲ್ಲೂಕುಗಳನ್ನು ಪುನರ್ ರಚನೆ ಮಾಡುವ ಸಂಬಂಧ ಸಾಧಕಬಾಧಕಗಳನ್ನು ಪರಿಶೀಲಿಸಲು 3 ಸಮಿತಿಗಳನ್ನು ನೇಮಿಸಲಾಗಿತ್ತು. ಈ ಮೂರು ಸಮಿತಿಗಳು ಒಟ್ಟಾರೆ 30 ಹೊಸ ತಾಲ್ಲೂಕುಗಳ ರಚನೆಗೆ ಶಿಫಾರಸ್ಸು ಮಾಡಿರುತ್ತವೆ.

ಆದರೆ, ಈ ಮೂರು ಸಮಿತಿಗಳ ಶಿಫಾರಸ್ಸುಗಳನ್ನು ಸರ್ಕಾರ ಕೂಲಂಕುಷವಾಗಿ ಪರಿಶೀಲಿಸಿ ಹೊಸ ತಾಲ್ಲೂಕುಗಳನ್ನು ಸೃಜಿಸುವಾಗ ಆದಕ್ಕೆ ತಗಲುವ ವೆಚ್ಚ ಮತ್ತು ಇತರೇ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು, ಹೊಸ ತಾಲ್ಲುಕುಗಳನ್ನು ರಚಿಸುವ ಬದಲು ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ವಿಶೇಷ ತಹಸೀಲ್ದಾರ್ ನೇಮಕಾತಿ ಮಾಡುಲು ತೀರ್ಮಾನ ತೆಗೆದುಕೊಂಡಿದೆ. ಹೀಗಾಗಿ, ಹೊಸ ತಾಲ್ಲುಕುಗಳನ್ನು ರಚಿಸುವ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳಲಾಗಿರುವುದಿಲ್ಲ.

ಇ) ಶ್ರೀ. ಪಿ.ಸಿ.ಗದ್ದಿಗೌಡರ್ ಸಮಿತಿಯು ಮಾತ್ರ ಲಕ್ಷ್ಮೇಶ್ವರವನ್ನು ತಾಲ್ಲೂಕು ಮಾಡಲು ಶಿಫಾರಸ್ಸು ಮಾಡಿರುತ್ತದೆ.

ಈ) ಯಾವುದೇ ಪಟ್ಟಣವನ್ನು ತಾಲ್ಲೂಕು ಕೇಂದ್ರವಾಗಿ ಮಾಡಲು ಗುರ್ತಿಸಿರುವುದಿಲ್ಲ. ಇದುವರೆಗೆ ಅವಶ್ಯಕತೆ ಇರುವ ಮೂವರು ವಿಶೇಷ ತಹಸೀಲ್ದಾರ್‌ರನ್ನು ಕ್ರಮವಾಗಿ, ಹನೂರು, ಮೂಡಬಿದ್ರೆ ಮತ್ತು ಗುಳೇದಗುಡ್ಡಕ್ಕೆ ನೇಮಕ ಮಾಡಲಾಗಿದೆ.

ಮೈಸೂರು-ಬೆಂಗಳೂರು ಕಾರಿಡಾರ್ ರಸ್ತೆ

290 (2412) ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ(ಚಾಮರಾಜ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಆ) ಮೈಸೂರು-ಬೆಂಗಳೂರು ನಡುವಿನ ಕಾರಿಡಾರ್ ರಸ್ತೆ ನಿರ್ಮಿಸುವ ವಿಚಾರದಲ್ಲಿ ಪೂರ್ಣ ಭೂ ಸ್ವಾಧೀನ ಪ್ರಕ್ರಿಯೆ ಮುಗಿದಿದೆಯೇ?

ಎಲ್ಲೆಲ್ಲಿ ಎಷ್ಟೆಷ್ಟು ಭೂ ಸ್ವಾಧೀನ ಮಾಡಿಕೊಳ್ಳಲಾಗಿದೆ.

ಆ) ಉದ್ದೇಶಿತ ಈ ಯೋಜನೆಯ ಕಾಮಗಾರಿಯನ್ನು ಯಾವ ಸಂಸ್ಥೆಗೆ ಯಾವ ಮಾನದಂಡ ಆಧರಿಸಿ ನೀಡಲಾಗಿದೆ?

ಇ) ಈ ಕಾಮಗಾರಿ ಪ್ರಾರಂಭ ಆಗುವುದು ಯಾವಾಗ?